# ಅಧ್ಯಾಯ ಒಂದು

# ಮೈಸೂರು ಜಿಲ್ಲೆಯ ಸಾಂಸ್ಕೃತಿಕ ಪರಿಸರ

# ಅಧ್ಯಾಯ – ೧

## ಮೈಸೂರು ಜಿಲ್ಲೆಯ ಸಾಂಸ್ಕೃತಿಕ ಪರಿಸರ

ಈ ಅಧ್ಯಾಯದಲ್ಲಿ ನಾವು ವಿಷಯ ಪ್ರವೇಶ ಮಾಡುವುದಕ್ಕೆ ಮೊದಲು ಜಿಲ್ಲೆಯ ಸಂಕ್ಷಿಪ್ತ ವಿವರವನ್ನು ತಿಳಿದುಕೊಂಡು ಮುನ್ನಡೆಯ ಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಭೌಗೋಳಿಕ, ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ವಿಚಾರಗಳನ್ನು ಕುರಿತು ಗಮನ ಹರಿಸಬೇಕಾಗುತ್ತದೆ. ಜಿಲ್ಲೆಯ ಅರಿವಿಲ್ಲದೆ ಧಾರ್ಮಿಕ ಸಂಸ್ಥೆಗಳ ಅರಿವನ್ನು ತಿಳಿಯುವುದು ಸಮಂಜಸವಲ್ಲ. ಮೈಸೂರು ಕರ್ನಾಟಕ ರಾಜ್ಯದಲ್ಲಿರುವ ಒಂದು ಪ್ರಸಿದ್ಧನಗರ. ಮೈಸೂರು ಇದೇ ಹೆಸರಿನ ಜಿಲ್ಲೆಯ ಆಡಳಿತ ಕೇಂದ್ರ ಮತ್ತು ಹಿಂದಿನ ಮೈಸೂರು ಸಂಸ್ಥಾನದ ಹಳೆಯ ರಾಜಧಾನಿ. ಮೈಸೂರನ್ನು **"ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ"** ಎಂದು ಕರೆಯುತ್ತಾರೆ. ಅಲ್ಲದೆ ಇಲ್ಲಿ ಅನೇಕ ಸುಂದರ ವಾಸ್ತುಶಿಲ್ಪವನ್ನು ಹೊಂದಿರುವ ಅರಮನೆಗಳಿರುವುದರಿಂದ ಮೈಸೂರನ್ನು **'ಅರಮನೆಗಳ ನಗರ'** ಎಂದೂ ಸಹ ಕರೆಯುತ್ತಾರೆ. ಇಂಥ ಈ ಜಿಲ್ಲೆ ಕರ್ನಾಟಕರಾಜ್ಯದ ಎರಡನೇ ಅತಿ ದೊಡ್ಡ ನಗರವೆಂಬ ಪ್ರಖ್ಯಾತಿಯನ್ನು ಗಳಿಸಿ ವಿಶ್ವಪ್ರಸಿದ್ಧಿಯನ್ನು ಪಡೆದಿದೆ.

**ಭೌಗೋಳಿಕ ಹಿನ್ನೆಲೆ :**

ಮೈಸೂರು ಜಿಲ್ಲೆಯು ಭೌಗೋಳಿಕವಾಗಿ ಎಲ್ಲ ರೀತಿಯಿಂದಲೂ ಸುರಕ್ಷಿತ ಪ್ರದೇಶವಾಗಿ ಗುರುತಿಸಿಕೊಂಡಿದೆ. ಈ ಜಿಲ್ಲೆಯ ಉತ್ತರಪೂರ್ವಕ್ಕೆ ಮಂಡ್ಯಜಿಲ್ಲೆ, ದಕ್ಷಿಣಪೂರ್ವಕ್ಕೆ ಚಾಮರಾಜನಗರ ಜಿಲ್ಲೆ, ದಕ್ಷಿಣಕ್ಕೆ ತಮಿಳುನಾಡುರಾಜ್ಯ, ದಕ್ಷಿಣ ಪಶ್ಚಿಮಕ್ಕೆ ಕೇರಳ ರಾಜ್ಯ, ಪಶ್ಚಿಮಕ್ಕೆ ಕೊಡುಗು ಜಿಲ್ಲೆ ಮತ್ತು ಉತ್ತರಕ್ಕೆ ಹಾಸನ ಜಿಲ್ಲೆಯನ್ನು ಗಡಿಯಾಗಿ ಹೊಂದಿರುವ ಮೈಸೂರು ಜಿಲ್ಲೆಯ ಒಟ್ಟು ವಿಸ್ತೀರ್ಣ ೬೨೬೮ (೬೨೬೮) ಚದರ ಕಿಲೋಮೀಟರಗಳಷ್ಟಿದೆ.

ಮೈಸೂರುಜಿಲ್ಲೆಯು ದಖ್ಖನ್ ಪ್ರಸ್ಥಭೂಮಿಯ ಮೇಲಿದೆ. ಜಿಲ್ಲೆಯ ಉತ್ತರ–ಪಶ್ಚಿಮ ಮತ್ತು ಪೂರ್ವಭಾಗಗಳ ಮೂಲಕ ಹರಿಯುವ ಕಾವೇರಿನದಿ ಜಲಾನಯನ ಪ್ರದೇಶವು ಸದಾ ಹಸಿರಾಗಿದೆ. ಕಾವೇರಿನದಿಗೆ ಅಡ್ಡಲಾಗಿ ಕಟ್ಟಿರುವ **ಕೃಷ್ಣರಾಜಸಾಗರ** ಅಣೆಕಟ್ಟು ಜಿಲ್ಲೆಯ ಉತ್ತರದಲ್ಲಿದೆ. ಬಂಡೀಪುರ ಅಭಯಾರಣ್ಯ ಮೈಸೂರು ಜಿಲ್ಲೆಯ ಅವಿಭಾಜ್ಯ ಅಂಗವಾಗಿದೆ. ಅಲ್ಲದೆ ನಾಗರಹೊಳೆ ಅಭಯಾರಣ್ಯ ಭಾಗಶಃ ಮೈಸೂರುಜಿಲ್ಲೆ, ಭಾಗಶಃ ಕೊಡುಗುಜಿಲ್ಲೆಯಲ್ಲಿದೆ. ಈ ಜಿಲ್ಲೆಯಲ್ಲಿ ಕಾವೇರಿ, ಕಪಿಲ, ಲಕ್ಷ್ಮಣತೀರ್ಥ ಮುಂತಾದ ಪ್ರಮುಖ ನದಿಗಳು ಹರಿಯುತ್ತವೆ. ಕಪಿಲನದಿಗೆ ಹೆಗ್ಗಡದೇವನಕೋಟೆಯ ಹತ್ತಿರ ಬಿಚನಹಳ್ಳಿಯಲ್ಲಿ **'ಕಬಿನಿಜಲಾಶಯ'** ನಿರ್ಮಿಸಿ ಸಾವಿರಾರು ಎಕರೆ ಪ್ರದೇಶವನ್ನು ನೀರಾವರಿಗೆ

ಒಳಪಡಿಸಲಾಗಿದೆ. ಜೊತೆಗೆ ಕುಡಿಯುವ ನೀರಿನ ಸಮಸ್ಯೆ ನೀಗಿಸಲು ಬಳಸಿಕೊಳ್ಳಲಾಗಿದೆ. ಇಡೀ ರಾಜ್ಯದಲ್ಲಿ ಮೊದಲು ಭರ್ತಿಯಾಗುವ ಜಲಾಶಯ ಎಂದರೆ 'ಕಬಿನಿ ಜಲಾಶಯ'.

**ಪೌರಾಣಿಕ ಮತ್ತು ಐತಿಹಾಸಿಕ ಹಿನ್ನೆಲೆ :**

'ಮೈಸೂರು' ಎಂಬ ಹೆಸರು ಪ್ರಾಚೀನ ಕಾಲದಿಂದಲೂ ಪ್ರಸಿದ್ಧ. ಈ ಹೆಸರನ್ನು ಕುರಿತು ಕತೆ, ಪುರಾಣ ಮತ್ತು ಹಾಡುಗಳು ಪ್ರಚಲಿತದಲ್ಲಿವೆ. ಮಹಿಷಾಸುರನೆಂಬ ರಾಕ್ಷಸ, ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ ಹೆಣ್ಣಿನಿಂದ ಮಾತ್ರ ತನಗೆ ಸಾವೆಂದು ವರ ಪಡೆದು ಮಹಿಷಮಂಡಲವನ್ನು ಆಳುತ್ತಿದ್ದ. ಅವನ ಉಪಟಳವನ್ನು ಸಹಿಸಲಾಗದೆ ದೇವತೆಗಳು ತಮ್ಮೆಲ್ಲ ಶಕ್ತಿಯನ್ನು, ಶಕ್ತಿಸ್ವರೂಪಿಯಾದ ಚಾಮುಂಡಿಗೆ ನೀಡಿದರು. ನಂತರ ಚಾಮುಂಡೇಶ್ವರಿ ಅವನನ್ನು ಸಂಹರಿಸಿದಳೆಂದು ಹೇಳಲಾಗುತ್ತಿದೆ. ಈ ಮಹಿಷಮರ್ದಿನಿ ಇಂದಿಗೂ ಮೈಸೂರು ಅರಸರ ಮನೆದೇವರಾಗಿ ಪೂಜೆಗೊಳ್ಳುತ್ತಿರುವುದನ್ನು ಗಮನಿಸಬಹುದು. ಮಹಿಷಮಂಡಲ, ಮಹಿಷಪುರಿ, ಮಹಿಶೂರಪುರ, ಮಹಿಶೂರು ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತಿದ್ದ ಈ ನಗರ ಇಂದು ಮೈಸೂರಾಗಿದೆ. 'ಶಿಷ್ಟಪುರಾಣದ ಪ್ರಕಾರ ಅಷ್ಟದಳಯುಕ್ತ ಕಮಲದಂತಿರುವ ತ್ರಿಮುಕುಟ ಕ್ಷೇತ್ರದಲ್ಲಿರುವ ಪಶ್ಚಿಮ ದಳವೇ ಮಹಾಬಲಗಿರಿ ಅಥವಾ ಚಾಮುಂಡಿ ಬೆಟ್ಟ. (ಚಾಮುಂಡೇಶ್ವರಿ ಬೆಟ್ಟದ ಮಹಾತ್ಮ – ೧೯೧೩)

ಮತ್ತೊಂದೆಡೆ 'ಮೈಸೂರು' ಎಂಬ ಹೆಸರು ಆಂಗ್ಲಭಾಷೆಯಿಂದ ರೂಪಾಂತರಗೊಂಡಿದೆ. ಇದರ ಮೂಲ ಹೆಸರು 'ಮಹಿಷಪುರಿ' ಇದರರ್ಥ ಮಹಿಷನ ವಾಸಸ್ಥಾನ ಎಂದು ಹೇಳಬಹುದು. ಮಹಿಷ ಎಂದರೆ ಪುರಾಣದಲ್ಲಿ ಬರುವ ಒಬ್ಬ ರಾಕ್ಷಸ. ಈತ ಮಾನವ ಮತ್ತು ಎಮ್ಮೆ ಎರಡು ರೂಪದಲ್ಲಿ ಇರುವ ವ್ಯಕ್ತಿ. ಹಿಂದೂ ಪುರಾಣದ ಪ್ರಕಾರ ಈ ಪ್ರದೇಶವನ್ನು ರಾಕ್ಷಸನಾದ ಮಹಿಷಾಸುರನು ಆಳುತ್ತಿದ್ದನಂತೆ. ದೇವತೆಗಳಿಗೆಲ್ಲ ಕಿರುಕುಳ ಕೊಡುತ್ತಿದ್ದಾಗ, ಎಲ್ಲಾ ದೇವತೆಗಳು ತ್ರಿಮೂರ್ತಿಸಹಿತವಾಗಿ ಆದಿಶಕ್ತಿಗೆ ತಮ್ಮ ಶಕ್ತಿ ಆಯುಧಗಳನ್ನು ಧಾರೆ ಎರೆದು ಕೊಟ್ಟರಂತೆ, ನಂತರ ಆದಿಶಕ್ತಿ ಚಾಮುಂಡಿಯ ಅವತಾರ ತಾಳಿ ಮಹಿಷಾಸುರನನ್ನು ಸಂಹರಿಸುತ್ತಾಳೆ. ಚಾಮುಂಡೇಶ್ವರಿಯಿಂದ ಈ ರಾಕ್ಷಸ ಹತನಾದ ಬಳಿಕ ದೇವಿಯ ಈ ಬೆಟ್ಟದಲ್ಲಿ ನೆಲೆಸುತ್ತಾಳೆ. ಅಲ್ಲಿಯ ತನಕ ಮಹಾಬಲೇಶ್ವರಬೆಟ್ಟವಾಗಿದ್ದ ಈ ಪ್ರದೇಶ ಮುಂದೆ ಚಾಮುಂಡಿಬೆಟ್ಟವಾಗಿ, ಇಲ್ಲಿ ನೆಲೆಸಿರುವ ದೇವತೆ ಚಾಮುಂಡೇಶ್ವರಿ ಎಂದು ನಾಮಕರಣಗೊಂಡು ಮೈಸೂರುಒಡೆಯರ ಕುಲದೇವತೆಯಾಗಿ ಪೂಜೆಗೊಳ್ಳುತ್ತಿದ್ದಾಳೆ. ನಂತರ ದಿನಗಳಲ್ಲಿ ಈ ಮಹಿಷೂರು ಮಹಿಸೂರಾಗಿ ಅಪಭ್ರಂಶ ಪಡೆದು ತದನಂತರ ಕೊನೆಗೆ ಮೈಸೂರಾಗಿದೆ ಎಂದು ಹೇಳಲಾಗುತ್ತದೆ.

ಮೈಸೂರುಜಿಲ್ಲೆಯ ಇತಿಹಾಸವನ್ನು ನಾವು ಹುಡುಕುತ್ತ ಹೊರಟರೆ ಕ್ರಿ.ಪೂ. ನಾಲ್ಕನೇ ಶತಮಾನದಿಂದಲೇ ಆರಂಭವಾಗುತ್ತದೆ. ಈ ಶತಮಾನದಲ್ಲಿ ಉತ್ತರ ಭಾರತವನ್ನು ಆಳುತ್ತಿದ್ದ ಮೌರ್ಯ ವಂಶದ ದೊರೆಗಳು ದಕ್ಷಿಣಕ್ಕೆ ಬಂದು ತಮ್ಮ ಆಳ್ವಿಕೆ ನಡೆಸಿರುವುದು, ಶ್ರೀಲಂಕ ದೇಶದ 'ಮಹಾವಂಶ' ಎಂಬ ಗ್ರಂಥದಿಂದ ತಿಳಿಯುತ್ತದೆ. ಅಶೋಕನ ಕಾಲದ ಬೌದ್ಧಬಿಕ್ಕುಗಳು ಮಹಿಷಮಂಡಲಕ್ಕೆ ಬೇಟಿ ಕೊಟ್ಟಿರುವುದು ಕಂಡುಬರುತ್ತದೆ. ನಂತರದಲ್ಲಿ ಶಾತವಾಹನರು ಮತ್ತು ಕದಂಬರ ಕಾಲಕ್ಕೆ ಸಂಬಂಧಿಸಿದಂತ ಯಾವ ಶಾಸನಗಳು ನಮಗೆ ಇಲ್ಲಿ ದೊರೆತಿಲ್ಲ. ಇವರ ನಂತರ ಗಂಗರು ಮೈಸೂರನ್ನು ಆಳ್ವಿಕೆ ಮಾಡಿದ್ದರು.ಇದಕ್ಕೆ ಪೂರಕವಗಿ ಈ ಜಿಲ್ಲೆಯಲ್ಲಿ ಬರುವ ತಲಕಾಡು ಗಂಗರ ರಾಜಧಾನಿಯಾಗಿತ್ತು ಎಂಬುದಕ್ಕೆ ಉದಾಹರಣೆಯಾಗಿ "ಗಂಗವಾಡಿ-೯೬೦೦೦" ಎಂದು ಶಾಸನಗಳಲ್ಲಿ ಕರೆಯಲಾಗಿದೆ. ಮೊದಲು ಕುವಳಾಲ (ಕೋಲಾರ), ನಂದಿಗಿರಿ (ನಂದಿಬೆಟ್ಟ) ಇವರ ರಾಜಧಾನಿಯಾಗಿತ್ತು. ಈ ವಂಶದ ಮೂರನೇರಾಜನಾದ ಹರಿವರ್ಮನ ಒಂದು ಶಾಸನ 'ತಲಕಾಡು' ಇವರ ರಾಜಧಾನಿಯಾಗಿತ್ತು ಎಂದು ಅಧಿಕೃತವಾಗಿ ತಿಳಿಸುತ್ತದೆ. ಕನ್ನಡವನ್ನು ಮಾತೃಭಾಷೆಯಾಗುಳ್ಳ ಹಾಗೂ ಅಧಿಕ ಸಂಖ್ಯೆಯಲ್ಲಿ ವಾಸಿಸುತ್ತಿರುವ ಗಂಗಡಿಕಾರ, ಒಕ್ಕಲಿಗ ಗುಂಪಿಗೆ ಸೇರಿದವರೆಂದು ಇವರನ್ನು ತಿಳಿಯಲಾಗಿದೆ. ಆದುದರಿಂದ ಅವರ ರಾಜ್ಯಕ್ಕೆ ಗಂಗವಾಡಿ ಎಂದು ಇವರ ಸಂತತಿಗೆ ಗಂಗರೆಂದು ಹೆಸರಾಯಿತು. ಈ ವಿಚಾರವನ್ನು ಹಳೇ ಬೋಗಾದಿ ಮತ್ತು ವರುಣ ಗ್ರಾಮದ ಭೂತೇಶ್ವರ ದೇವಾಲಯ ಹಾಗೂ ತಲಕಾಡಿನ ಸುತ್ತಮುತ್ತಲ ಪ್ರದೇಶಗಳಲ್ಲಿ ದೊರಕುವ ಶಾಸನಗಳಿಂದ ತಿಳಿಯಬಹುದು. ಇವರ ತರುವಾಯ ಚಾಲುಕ್ಯರು, ನೊಳಂಬರು, ಚೋಳರು ಅಧಿಕಾರ ನಡೆಸಿದರು. ಹೊಯ್ಸಳರು ಈ ಜಿಲ್ಲೆಗೆ ತಮ್ಮದೆ ಆದ ಕೊಡುಗೆ ನೀಡಿದ್ದಾರೆ.

ಮೈಸೂರು ನಗರದ ಅಸ್ತಿತ್ವ ಹಾಗೂ ಇತಿಹಾಸ ಕುರಿತು ಹೇಳುವಾಗ ಮಹಿಷಮಂಡಲದ ಭಾಗವನ್ನು ಪ್ರಾಚೀನ ತಮಿಳು ಸಾಹಿತ್ಯದಲ್ಲಿ "ಎರುಮೈನಾಡು", 'ಇರುಮೈನಾಡೇ' ಎಂದು ಉಲ್ಲೇಖಿಸಲಾಗಿದೆ. ಆದ್ದರಿಂದ ಕ್ರಿ.ಪೂ.ದಿಂದಲೇ ಮೈಸೂರಿನ ಪ್ರಾಚೀನತೆಯನ್ನು ಗುರುತಿಸಬಹುದು. ಶಾಸನಗಳಲ್ಲಿ ಮೈಸೂರನ್ನು 'ಮಹಿಊರು', ಮಹಿಷಪುರ, ಮಹಿಷೂರಪುರ, ಮಹಿಷಾನರಪುರ, ಮಹಿಶೂರಪುರ ಎಂದು ಉಲ್ಲೇಖಿಸಲಾಗಿರುವುದು ಕಂಡುಬರುತ್ತದೆ. 'ಮೈಸೂನಾಡು-೭೦ ಅಸ್ತಿತ್ವದಲದಲ್ಲಿತ್ತು ಎಂಬುದಕ್ಕೆ ಶಾಸನಾಧಾರವಿದೆ. ನಂದಿಗುಂದಗ್ರಾಮವು ಮೈಸೂನಾಡು-೭೦ಕ್ಕೆ ಸೇರಿತ್ತು ಎಂದು (ನಂಜನಗೂಡು ಶಾಸನ - ೧೦೨೧) ಉಲ್ಲೇಖಿಸಲಾಗಿದೆ. ಮೈಸೂನಾಡು - ೭೦ ಎಂಬ ಎಪ್ಪತ್ತು ಗ್ರಾಮಗಳ ಪ್ರಾಂತ್ಯಕ್ಕೆ ಮೈಸೂರು ಕೇಂದ್ರವಾಗಿದ್ದಿರಬೇಕೆಂದು [ರಾಜಧಾನಿ] ಅಭಿಪ್ರಾಯ ಪಡಲಾಗಿದೆ. ಮಂಡ್ಯ ತಾಲ್ಲೂಕಿನ ಕದಲೂರಿನ ೮೬೨ರ ತಾಮ್ರ ಶಾಸನದಲ್ಲಿ 'ಮೈಸೂರು' ಎಂದು ಸ್ಪಷ್ಟವಾಗಿ ಉಲ್ಲೇಖಿತವಾಗಿದೆ. ಮುಂದೆ ೧೧-೧೨ನೇ ಶತಮಾನದ ಕೆಲವು

ಶಾಸನಗಳಲ್ಲಿ ಮೈಸೂನಾಡು ಎಂದಿರುವುದನ್ನು ಗುರುತಿಸಲಾಗಿದೆ. ಕೆಲವು ಸಾಹಿತ್ಯ ಕೃತಿಗಳಲ್ಲೂ 'ಮಹಿಶೂರಪುರ' ಎಂದಿರುವುದನ್ನು ನಾವು ಗಮನಿಸಬಹುದು. ಮಹಿಷಾಸುರನನ್ನು ಕೊಂದ ಚಾಮುಂಡಿ ಆ ಬೆಟ್ಟದಲ್ಲಿ ನೆಲೆಸಿರುವುದರಿಂದ ಚಾಮುಂಡಿಬೆಟ್ಟವೆಂದು. ಮಹಿಷಾಸುರನಿಂದ ಈ ಊರಿಗೆ ಮಹಿಷಪುರವೆಂದು ಹೆಸರಾಗಿ ಮುಂದೆ ಅದೇ ಮೈಸೂರಾಯಿತೆಂದು ಹೇಳಲಾಗುತ್ತಿದೆ. ೧೪೯೯ರ ನಂತರದ ಶಾಸನಗಳಲ್ಲಿ ಮೈಸೂರು ಎಂಬ ಹೆಸರು ಸ್ಪಷ್ಟ ಉಲ್ಲೇಖಗೊಂಡಿರುವುದು ಕಂಡುಬರುತ್ತದೆ. ಅಶೋಕನ ಕಾಲದಿಂದ ಮೈಸೂರಿನ ಒಡೆಯರ ಕಾಲದವರೆಗೂ ವಿಭಿನ್ನ ಬಗೆಯ ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಪ್ರಭಾವಗಳಿಗೆ ಒಳಗಾಗಿದ್ದ ಈ ನಗರವು ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಅನೇಕ ಸ್ಥಿತ್ಯಂತರಗಳನ್ನು ಕಂಡಿದೆ. ಮತ್ತೊಂದು ಮೂಲಗಳ ಪ್ರಕಾರ ಜಿಲ್ಲೆಯ ಇತಿಹಾಸ ಈ ರೀತಿಯಿದೆ. ಮೈಸೂರು ನಗರ ಸ್ಥಾಪನೆ ಸುಮಾರು ೧೧ನೇ ಶತಮಾನದಲ್ಲಿ ಆಗಿತ್ತೆಂದು ನಂಬಲಾಗಿದೆ. ೧೪ನೆಯ ಶತಮಾನದ ಕೊನೆಯಲ್ಲಿ ಬರುವ ಒಡೆಯರವಂಶದ ಅರಸರು ಮೈಸೂರನ್ನು ಆಳಲು ಆರಂಭಿಸಿದರು. ಈ ವಂಶದ ಮೊದಲ ಅರಸು 'ಯದುರಾಯ' ಹಾಗಾಗಿ ಈ ವಂಶಕ್ಕೆ ಮುಂದೆ 'ಯದುವಂಶ' ಎಂದು ಹೆಸರಾಯಿತು. ಮೊದಲಿಗೆ ವಿಜಯನಗರ ಸಾಮ್ರಾಜ್ಯದ ಭಾಗವಾಗಿದ್ದ ಈಸಂಸ್ಥಾನ ೧೬೫೬ರಲ್ಲಿ ವಿಜಯನಗರದ ಪತನದ ನಂತರ ಸ್ವತಂತ್ರ ರಾಜ್ಯವಾಯಿತು. ರಣಧೀರ ಕಂಠೀರವ ನರಸರಾಜ ಒಡೆಯರ್ ಈ ಸಂಸ್ಥಾನವನ್ನು ವಿಸ್ತರಿಸಿದವರಲ್ಲಿ ಒಬ್ಬರಾಗಿದ್ದಾರೆ.

೧೮ನೆಯ ಶತಮಾನದಲ್ಲಿ ಒಡೆಯರ್ ಅರಸರ ಪ್ರಭಾವ ಕಡಿಮೆಯಾಗಿ ಹೈದರಾಲಿ ಮತ್ತು ಟಿಪ್ಪು ಸುಲ್ತಾನ್‌ರ ಆಡಳಿತ ನಡೆಯಿತು. ಈ ಸಮಯದಲ್ಲಿ ಸಾಮ್ರಾಜ್ಯದ ರಾಜಧಾನಿ ಶ್ರೀರಂಗಪಟ್ಟಣ ಮತ್ತು ಮೈಸೂರು ನಗರಗಳ ನಡುವೆ ಬದಲಾಗುತ್ತಿತ್ತು. ಮೈಸೂರು ಸಂಸ್ಥಾನ ಆಧುನಿಕ ಕರ್ನಾಟಕದ ದಕ್ಷಿಣ ಭಾಗದ ಬಹುಭಾಗವನ್ನು ಒಳಗೊಂಡಿತ್ತು. ೧೭೯೯ ರಲ್ಲಿ ಟಿಪ್ಪು ಸುಲ್ತಾನನ ಸೋಲಿನ ನಂತರ, ಬ್ರಿಟಿಷರು ಒಡೆಯರ್ ಮನೆತನವನ್ನು ಸಿಂಹಾಸನದ ಮೇಲೆ ಪುನಃ ಸ್ಥಾಪಿಸಿದರು. ಮೈಸೂರು ಬ್ರಿಟಿಷ್‌ಸಾಮ್ರಾಜ್ಯದ ಕೆಳಗೆ ಉಳಿಯಿತು. ಮತ್ತು ೧೮೩೪ರಲ್ಲಿ ರಾಜಧಾನಿಯನ್ನು ಬೆಂಗಳೂರಿಗೆ ವರ್ಗಾಯಿಸಲಾಯಿತು. ಮೈಸೂರು ಸಂಸ್ಥಾನ ೧೯೪೩ರಲ್ಲಿ 'ಮೈಸೂರು ರಾಜ್ಯ' ಎಂಬ ಹೆಸರು ಪಡೆಯಿತು. ನಂತರ ಈ ರಾಜ್ಯ ೧೯೪೬ರ ಏಕೀಕರಣದ ನಂತರ "ವಿಶಾಲ ಮೈಸೂರು ರಾಜ್ಯ" ಎಂಬ ಹೆಸರು ಪಡೆಯಿತು. ಆ ಬಳಿಕ ೧೯೭೩ರ ನವೆಂಬರ್ ೧ರಲ್ಲಿ "ಕರ್ನಾಟಕ ರಾಜ್ಯ" ಎಂಬ ಹೆಸರು ಸ್ಥಿರವಾಯಿತು.

**ಸಾಮಾಜಿಕ ಪರಿಸರ :**

ಕರ್ನಾಟಕದ ಸಾಂಸ್ಕೃತಿಕ ನಗರಿ ಎಂದು ಪ್ರಸಿದ್ಧವಾದ ಮೈಸೂರು ಜಿಲ್ಲೆಯು ೧೯೭೩ರ ತನಕ ಇಡೀ ರಾಜ್ಯದ ಹೆಸರಾಗಿತ್ತು. ಮೈಸೂರನ್ನು ಆಳ್ವಿಕೆ ಮಾಡಿದ ನಾಲ್ವಡಿ ಕೃಷ್ಣರಾಜ ಒಡೆಯರಂತಹ ಅರಸರು. ತಾಂತ್ರಿಕ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದಂತಹ ಸರ್.ಎಂ. ವಿಶ್ವೇಶ್ವರಯ್ಯನವರಂತಹವರು ಹಾಗೂ ಇನ್ನು ಅನೇಕ ದಿವಾನರುಗಳು ಮತ್ತು ವೈಸ್‌ರಾಯ್‌ಗಳ ಸೇವೆಯನ್ನು ಪಡೆದಿದ್ದ ಜಿಲ್ಲೆ ಇಡೀ ಏಷ್ಯಾಖಂಡದಲ್ಲೇ ಮೊದಲ ಬಾರಿಗೆ ಜಲವಿದ್ಯುತ್ತನ್ನು ಉತ್ಪಾದಿಸಿ ಅದನ್ನು ಬಳಕೆಗೆ ತಂದ ಕೀರ್ತಿ ಮೈಸೂರು ರಾಜ್ಯದ್ದಾಗಿದೆ. ಚಾಮುಂಡಿಬೆಟ್ಟ, ಮೈಸೂರು ಅರಮನೆ, ಬೃಂದಾವನ, ರೇಷ್ಮೆಕೈಗಾರಿಕೆ, ದಸರೆಯ ಜಂಬುಸವಾರಿ, ಶ್ರೀಗಂಧದ ಕರಕುಶಲ ಕೈಗಾರಿಕೆ ಹಾಗೂ ಪಂಚಲಿಂಗದರ್ಶನ, ಮುಡುಕುತೊರೆ ಜಾತ್ರೆ, ತ್ರಿವೇಣಿ ಸಂಗಮದ ಕುಂಭಮೇಳ, ಮಾದವಮಂತ್ರಿಅಣೆಕಟ್ಟೆ. ಹೊಯ್ಸಳ ಮತ್ತು ಗಂಗರಕಾಲದ ದೇವಾಲಯಗಳು, ಉಕ್ಕಲಗೆರೆಬೆಟ್ಟ, ನಂಜನಗೂಡಿನ ನಂಜುಂಡೇಶ್ವರ ದೇವಸ್ಥಾನ ಮತ್ತು ರಥೋತ್ಸವ. ಬೈಲುಕುಪ್ಪೆಯ ಬೌದ್ಧವಿಹಾರದ ಸ್ವರ್ಣಮಂದಿರ, ಗೋಮ್ಮಟಗಿರಿ, ಕಾಫಿಬೀಜ ಸಂಸ್ಕರಣಕೇಂದ್ರ. ಅರ್ಕೇಶ್ವರದೇವಾಲಯ, ಸಾಲಿಗ್ರಾಮದ ಜೈನಬಸದಿಗಳು, ಚುಂಚನಕಟ್ಟೆ ಜಾತ್ರೆ ಮತ್ತು ಕಾವೇರಿ ಜಲಪಾತ, ಕಬಿನಿ ಅಣೆಕಟ್ಟೆ ಮುಂತಾದವು ಮೈಸೂರನ್ನು ದೇಶ-ವಿದೇಶಗಳಲ್ಲಿ ಪ್ರಸಿದ್ಧಗೊಳಿಸಿವೆ. ಬ್ರಿಟಿಷರ ಆಳ್ವಿಕೆಯಿಂದ ಪ್ರಾರಂಭಗೊಂಡು ಕರ್ನಾಟಕದ ಏಕೀಕರಣದವರೆಗೆ ಸುಮಾರು ೧೮೬೨ ರಿಂದ ೧೯೭೩ರತನಕ 'ಮೈಸೂರು' ರಾಜ್ಯದ ಹೆಸರಾಗಿ ರಾಜಧಾನಿಯಾಗಿ, ನಂತರ ಜಿಲ್ಲಾ ಕೇಂದ್ರವಾಗಿ ತನ್ನ ಸ್ಥಾನಮಾನ ಉಳಿಸಿಕೊಂಡಿದ್ದು, ಏಕೀಕರಣದ ನಂತರದ ವಿಂಗಡಣೆಗೊಂಡು ೨೧ ಜಿಲ್ಲೆಗಳಲ್ಲಿ ಒಂದಾಯಿತು.ಬೆಂಗಳೂರು ರಾಜಧಾನಿಯಾದರೆ ಮೈಸೂರು ಸಾಂಸ್ಕೃತಿಕ ರಾಜಧಾನಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಹನ್ನೊಂದು ತಾಲ್ಲೂಕುಗಳಿಂದ ಕೂಡಿದ ವಿಶಾಲ ಮೈಸೂರು ಜಿಲ್ಲೆಯನ್ನು ಆಡಳಿತ ದೃಷ್ಟಿಯಿಂದ ೧೯೯೯ರಲ್ಲಿ ಜಿಲ್ಲಾ ಪುನರ್‌ವಿಂಗಡಣೆಯಾದಾಗ ಜಿಲ್ಲೆಯ ನಾಲ್ಕು ತಾಲ್ಲೂಕುಗಳಾದ ಚಾಮರಾಜನಗರ, ಕೊಳ್ಳೇಗಾಲ, ಯಳಂದೂರು ಮತ್ತು ಗುಂಡ್ಲುಪೇಟೆ ಇವುಗಳನ್ನು ಸೇರಿ ಚಾಮರಾಜನಗರ ಜಿಲ್ಲೆ ರಚಿಸಲಾಯಿತು. ಪ್ರಸ್ತುತ ಮೈಸೂರು ಜಿಲ್ಲೆಯು ಮೈಸೂರು, ತಿರುಮಕೂಡಲುನರಸೀಪುರ, ನಂಜನಗೂಡು, ಕೃಷ್ಣರಾಜನಗರ, ಹುಣಸೂರು, ಪಿರಿಯಾಪಟ್ಟಣ ಮತ್ತು ಹೆಗ್ಗಡದೇವನಕೋಟೆ ಈ ಪ್ರಮುಖ ಏಳು ತಾಲ್ಲೂಕುಗಳನ್ನು ಒಳಗೊಂಡಿದೆ. ಡಿಸೆಂಬರ್-೨೦೦೫ರಲ್ಲಿ ಕರ್ನಾಟಕ ಸರ್ಕಾರ 'ಮೈಸೂರು ನಗರದ' ಇಂಗ್ಲೀಷ್ ಹೆಸರನ್ನು ಬದಲಾಯಿಸಲು ಇಚ್ಛೆಯನ್ನು ಪ್ರಕಟಿಸಿತು. ಇದನ್ನು ಭಾರತ ಸರ್ಕಾರವು ಇದನ್ನು ಅಂಗೀಕರಿಸಿದೆ.

ಆದರೆ ಈ ಹೆಸರನ್ನು ಸೇರಿಸಲು ಅಗತ್ಯ ವಿಧಿ ವಿಧಾನಗಳನ್ನು ಇನ್ನು ಪೂರ್ಣಗೊಳಿಸಿಲ್ಲ. ಇತ್ತೀಚೆಗೆ 'Mysooru' ಎಂದು ಬದಲಾಯಿಸಲಾಗಿದೆ.

ಮೈಸೂರು ನಗರದ ಆಡಳಿತವು ಮೈಸೂರು ಮಹಾನಗರ ಪಾಲಿಕೆಸಹಿತ ತಾಲ್ಲೂಕುಗಳಲ್ಲಿ ನಗರಸಭೆ, ಪುರಸಭೆ, ಪಟ್ಟಣಪಂಚಾಯ್ತಿಗಳಿಂದ ರಚನೆಯಾಗಿ ಜಿಲ್ಲೆ ಆಧುನಿಕರಣಗೊಂಡಿದೆ. ಮೈಸೂರು ಜಿಲ್ಲೆಯಲ್ಲಿ ಮೂಲತಃ ಅವಿಭಕ್ತ ಕುಟುಂಬ ವ್ಯವಸ್ಥೆಯಿದ್ದು, ನಂತರ ಹಲವಾರು ಕಾರಣಗಳಿಂದಾಗಿ ನಗರವಾಸ, ವಿದ್ಯಾಭ್ಯಾಸ, ಸಾರಿಗೆಸಂಪರ್ಕ, ವ್ಯಾಪಾರ, ವಾಣಿಜ್ಯ, ಕೈಗಾರಿಕೆಗಳ ಬೆಳವಣಿಗೆಯಿಂದ ಈ ಅವಿಭಕ್ತ ಕುಟುಂಬ ವ್ಯವಸ್ಥೆ ಇತ್ತೀಚೆಗೆ ಕಣ್ಮರೆಯಾಗುತ್ತಿವೆ. ಮಾಧ್ಯಮಗಳ ಪ್ರಭಾವದಿಂದ ಜನತೆ ನವನಾಗರೀಕ ಜೀವನಕ್ಕೆ ಮಾರುಹೋಗುತ್ತ, ಬದುಕಿನ ಎಲ್ಲಾ ಕ್ಷೇತ್ರಗಳಲ್ಲೂ ಬದಲಾವಣೆ ಕಂಡುಬರುತ್ತಿದೆ. ಸಂಪ್ರದಾಯಬದ್ಧವಾಗಿ ಬಂದಿರುವಂತಹ ಕೆಲವು ಆಚರಣೆಗಳು ಇಂದಿಗೂ ಜೀವಂತವಾಗಿರುವುದನ್ನು ಕಾಣಬಹುದು. ಜನನ ಮರಣಗಳ ಸಂದರ್ಭ, ನಾಮಕರಣ, ಸೂತಕ ತೆಗೆಯುವುದು, ತೊಟ್ಟಿಲುಶಾಸ್ತ್ರ ಮುಂತಾದ ಆಚರಣೆಗಳು ಇನ್ನೂ ಜೀವಂತವಾಗಿವೆ. ಈ ಜಿಲ್ಲೆಯಲ್ಲಿ ಎಲ್ಲಾ ವರ್ಗದ ಜನಾಂಗದವರೂ ಇದ್ದಾರೆ. ಕೆಲವರು ವೃತ್ತಿಯಾಧಾರ ಜನಾಂಗದವರು ಇದ್ದಾರೆ. ಅಗಸ, ಅರಸು, ಈಡಿಗ, ಉಪ್ಪಾರ, ಒಕ್ಕಲಿಗ, ಕುಂಬಾರ, ಕಮ್ಮಾರ, ಕುರುಬ, ಕ್ಷೌರಿಕ, ಅಕ್ಕಸಾಲಿಗ, ಗಾಣಿಗ, ಆದಿಕರ್ನಾಟಕ, ಗೂರ್ಖಾ, ಜಾಡಮಾಲಿ, ದರ್ಜಿ, ದೇವಾಂಗ, ಬಣಜಿಗ, ಬೆಸ್ತ, ಬ್ರಾಹ್ಮಣ, ಮಾದಿಗ, ಮಾರವಾಡಿ, ಮೇದ, ಮೊದಲಿಯಾರ್, ಯಾದವ, ಲಿಂಗಾಯಿತ, ತಮ್ಮಡಿ, ವಡ್ಡಾ, ನಾಯಕ, ವಿಶ್ವಕರ್ಮ, ವೈಶ್ಯ, ಕ್ರಿಶ್ಚಿಯನ್, ಮುಸ್ಲಿಂ, ಜೈನರು, ಬೌದ್ಧರು, ಟಿಬೇಟಿಯನ್ನರು ಹಾಗೂ ಇನ್ನಿತರೆ ಜನಾಂಗದವರಿದ್ದು, ಇವರಲ್ಲಿಯೂ ಅನೇಕ ಒಳಪಂಗಡ ಇರುವುದನ್ನು ಗಮನಿಸಬಹುದು. ಪ್ರತಿಯೊಂದು ಜನಾಂಗದವರು ಅವರವರ ಸಂಪ್ರದಾಯದಂತೆ ಹುಟ್ಟು, ಸಾವು ಮತ್ತು ಹುಟ್ಟು ಸಾವುಗಳ ನಡುವೆ ನಡೆಯುವಂತಹ ಅನೇಕ ಕಾರ್ಯಕ್ರಮಗಳಲ್ಲಿ ಪುರಾತನ, ಜನಪದ ಸಂಪ್ರದಾಯವನ್ನು ಮುಂದುವರಿಸುತ್ತಿದ್ದಾರೆ.

ಜಿಲ್ಲೆಯಲ್ಲಿ ಇರುವಂತಹ ಆಚರಣೆಗಳು ದಾಸಯ್ಯ, ಗುಡ್ಡಯ್ಯರನ್ನ ಬಿಡುವುದು, ಮಣೆಸೇವೆ, ಹರಿಸೇವೆ ಮಾಡುವುದು, ಕೊಂತಿ ಪೂಜೆ, ಶನಿಪೂಜೆ, ಪಂಚಮಿ, ಷಷ್ಠಿ ಆಚರಣೆ, ಪ್ರತಿ ಹಳ್ಳಿಗಳಲ್ಲಿ ಇರುವ ಜಾನಪದರ ಮುಖ್ಯ ದೇವತೆ ಮಾರಮ್ಮ, ಊರಮೇಗಲಮ್ಮ ಮುಂತಾದ ಗ್ರಾಮದೇವತೆಗಳ ಕಳಸಪೂಜೆ, ಪರ ಮಾಡುವುದು, ಕರಗಉತ್ಸವ ಇತ್ತೀಚೆಗೆ ರಾಷ್ಟ್ರೀಯ ಮತ್ತು ರಾಜ್ಯ ಹಬ್ಬಗಳ ಆಚರಣೆ ಸಾಧು–ಸಂತರ ದಿನಾಚರಣೆಗಳನ್ನು ಆಚರಿಸುತ್ತಾ ಬಂದಿರುವುದು ಕಂಡುಬರುತ್ತದೆ.

ಒಟ್ಟು ಜಿಲ್ಲೆಯಲ್ಲಿ ೨೦೧೧ರ ಜನಗಣತಿಯ ಪ್ರಕಾರ ೩೦,೦೧,೧೨೭. ಅದರಲ್ಲಿ ೧೫,೧೧,೬೦೦ ಪುರುಷರು, ೧೪,೮೯,೫೨೭ ಮಹಿಳೆಯರಿದ್ದಾರೆ. ಇವರಲ್ಲಿ ಮೈಸೂರು ನಗರವಾಸಿಗಳು ೧೨,೪೫,೪೧೩ ಇದ್ದರೆ, ೧೭,೫೫,೭೧೪ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಒಟ್ಟಾರೆ ಜಿಲ್ಲೆಯಲ್ಲಿ ಸಾಕ್ಷರತೆಯನ್ನು ದೃಷ್ಟಿಯಲ್ಲಿ ನೋಡುವುದಾದರೆ ೧೯,೬೨,೧೮೦ ಮಂದಿ ಶಿಕ್ಷಣ ಪಡೆದಿದ್ದಾರೆ. ಇವರಲ್ಲಿ ೧೦,೬೩,೭೬೬ ಪುರುಷರು, ೮,೯೮,೪೧೪ ಮಹಿಳೆಯರಿದ್ದಾರೆ.

**ಜಿಲ್ಲೆಯಲ್ಲಿ ಪ್ರಮುಖವಾಗಿ ಆಚರಿಸುವ ಹಬ್ಬಗಳು :**

ಚಾಮುಂಡೇಶ್ವರಿಹಬ್ಬ, ಮೈಸೂರುದಸರಾ, ಮೈಸೂರುಕರಗ, ತಲಕಾಡು ಪಂಚಲಿಂಗದರ್ಶನ, ಮುಡುಕುತೊರೆ ಜಾತ್ರೆ, ಸುತ್ತೂರುಜಾತ್ರೆ, ಸುಬ್ರಹ್ಮಣ್ಯೇಶ್ವರ ಷಷ್ಠಿ, ಅರ್ಕೇಶ್ವರ ಜಾತ್ರೆ, ಬೈಲುಕುಪ್ಪ ಉತ್ಸವ, ಭೀಮನಕೊಲ್ಲಿ ಜಾತ್ರೆ, ನಂಜುಂಡೇಶ್ವರ ರಥೋತ್ಸವ, ಗುಂಜಾನರಸಿಂಹಸ್ವಾಮಿ ಜಾತ್ರೆ, ನರಸೀಪುರ ತ್ರಿವೇಣಿ ಸಂಗಮದ ಕುಂಭಮೇಳ, ಈದ್‌ಮಿಲಾದ್, ಬಕ್ರೀದ್, ಕ್ರಿಸ್‌ಮಸ್ ದಿನಾಚರಣೆ, ದೇವನೂರುಪರಿಷೆ, ಹುಣಸೂರು ಬಾಹುಬಲಿ ಮಸ್ತಕಾಭಿಷೇಕ, ಮಾದಾಪುರ ಮಾರಮ್ಮನ ಕೊಂಡೋತ್ಸವ ಇಷ್ಟೇ ಅಲ್ಲದೇ ಪ್ರತಿ ಹಳ್ಳಿಹಳ್ಳಿಗಳಲ್ಲೂ ತಮ್ಮದೇ ಆದಂತಹ ವಿಶಿಷ್ಟ ಹಬ್ಬ–ಜಾತ್ರೆಗಳ ಆಚರಣೆ ಇರುವುದು ಕಂಡುಬರುತ್ತದೆ. ಈಜಿಲ್ಲೆಯು ಹಲವು ಧರ್ಮಿಯರಿಗೆ ಆಶ್ರಯನೀಡಿ ವಿವಿಧ ಸಂಸ್ಕೃತಿಗಳ ಆಸರೆಯಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಪಂಥಗಳ ವೈದಿಕ ಧರ್ಮ, ಶೈವ, ಲಕುಲೀಶ, ಪಾಶುಪಥ ಮುಂತಾದ ಪಂಥಗಳನ್ನು ಖಂಡಿಸಿ ರೂಪುಗೊಂಡ ವೀರಶೈವಧರ್ಮ, ಅಹಿಂಸೆಯನ್ನೇ ಪರಮ ಧ್ಯೇಯವಾಗಿಟ್ಟುಕೊಂಡ ಜೈನಧರ್ಮ ಮತ್ತು ಬೌದ್ಧ ಧರ್ಮ ಹೊರದೇಶಗಳಿಂದ ಪ್ರವೇಶಿಸಿ ಇಲ್ಲಿ ಬೇರು ಬಿಟ್ಟಿರುವ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳು ಹಾಗೂ ಜನರ ಬದುಕಿನಲ್ಲಿ ಒಂದಾಗಿ ಅವರಿಂದಲೇ ಬೆಳೆದುಬಂದ ಗ್ರಾಮೀಣ ದೇವತೆಗಳ ಆರಾಧನೆಯ ಪ್ರಧಾನವಾಗಿರುವ ಜನಪದ ಧರ್ಮ ಇವಗಳನ್ನು ನಾವು ಪ್ರಧಾನವಾಗಿ ಕಾಣಬಹುದು.

**ಆರ್ಥಿಕ ಪರಿಸರ :**

ಮೈಸೂರು ಜಿಲ್ಲೆಯ ವಾತಾವರಣ ಹಿತಕರವಾದ ತಂಪುವಾತವರಣವನ್ನು ಒಳಗೊಂಡಿದ್ದು, ರಾಷ್ಟ್ರೀಯ ಹೆದ್ದಾರಿಯನ್ನು ಒಳಗೊಂಡಿದ್ದು ಇದು ಕೇರಳ ಮತ್ತು ತಮಿಳುನಾಡು ರಾಜ್ಯಗಳನ್ನು ಸೇರುತ್ತದೆ. ಸದಾ ಸಮಶಿತೋಷ್ಣವಲಯದ ಹಿತಕರವಾದ ಹವಾಮಾನವನ್ನು ಹೊಂದಿದೆ. ಆರ್ಥಿಕವಾಗಿ ಮೈಸೂರು ಜಿಲ್ಲೆಯು ರಮಣೀಯ ಸ್ಥಳವಾಗಿದ್ದು ಪ್ರತಿವರ್ಷ ೩.೧೫ ಮಿಲಿಯನ್ ಪ್ರವಾಸಿಗರನ್ನು ಆಕರ್ಷಿಸುತ್ತದೆ. ನೇಯ್ಗೆ, ಗಂಧದ ಕಲಾಕೃತಿ, ಹಿತ್ತಾಳೆ ಕಲಾಕೃತಿ, ರೇಷ್ಮೆಸೀರೆ,

ಮೈಸೂರುಪಾಕು, ಮೈಸೂರುವೀಳ್ಯೆದೆಲೆ, ಮೈಸೂರಮಲ್ಲಿಗೆ, ಮೈಸೂರ ಪೇಟೆ ಮುಂತಾದವುಗಳಿಂದ ಪ್ರಸಿದ್ಧಿಪಡೆದಿದೆ. ಅತ್ಯಂತ ಸುಸಜ್ಜಿತ ನಗರವಾಗಿದ್ದು ಭಾರತದಲ್ಲಿ ೫ನೇ ಸ್ಥಾನವನ್ನು ಪಡೆದುಕೊಂಡಿದೆ. ಮಾಹಿತಿ ರಫ್ತು ತಂತ್ರಜ್ಞಾನದಲ್ಲಿ ಕರ್ನಾಟಕದಲ್ಲೇ ಎರಡನೇ ಸ್ಥಾನದಲ್ಲಿದೆ. ಈನಿಟ್ಟಿನಲ್ಲಿ ಇನ್‌ಫೋಸಿಸ್ ಅತ್ಯುತ್ತಮ ತಾಂತ್ರಿಕ ಕೇಂದ್ರವಾಗಿ ಕಂಡುಬರುತ್ತಿದ್ದು, ವಿಪ್ರೊ ಉತ್ತಮಗ್ಲೋಬಲ್ ಸರ್ವಿಸ್‌ಮ್ಯಾನೆಜ್‌ಮೆಂಟ್ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯವು ೧೯೧೬ರಲ್ಲಿಸ್ಥಾಪನೆಗೊಂಡಿದ್ದು ಕರ್ನಾಟಕದಪುರಾತನ ವಿಶ್ವವಿದ್ಯಾನಿಲಯವಾಗಿ ಮೊದಲನೇಸ್ಥಾನವನ್ನು ಪಡೆದಿದೆ. ಭಾರತದಲ್ಲೇ ಅತ್ತುತ್ತಮ ವಿಶ್ವವಿದ್ಯಾನಿಲಯಗಳಲ್ಲಿ ೭ನೇ ಅತ್ಯುತ್ತಮ ಸ್ಥಾನವನ್ನು ಪಡೆದಿದೆ.

ಜಿಲ್ಲೆಯಲ್ಲಿ ಕೃಷಿ ಮತ್ತು ಕೈಗಾರಿಕೆ ಸಮಪ್ರಮಾಣದಲ್ಲಿ ಹಂಚಿಕೆಯಾಗಿರುವುದು ಕಂಡುಬರುತ್ತದೆ. ಮುಖ್ಯವಾಗಿ ಭತ್ತ, ರಾಗಿ, ಕಬ್ಬು, ತಂಬಾಕು, ಜೋಳ, ತರಕಾರಿ, ಹೂವುಗಳು, ಬಾಳೆ, ಪ್ರಮುಖ ಬೆಳೆಗಳಾಗಿವೆ. ಈ ಬೆಳೆಗಳು ಕೂಡಾ ಸಾಮಾಜಿಕವಾಗಿ ವಲಯವಾರು ಹಂಚಿಕೆಯಾಗಿರುವುದನ್ನು ಗಮನಿಸಬಹುದು. ಅನೇಕ ಕೈಗಾರಿಕೆಗಳು ನಗರ ಮತ್ತು ಗ್ರಾಮೀಣ ಪರಿಸರದಲ್ಲಿ ಸ್ಥಾಪಿಸಲ್ಪಟ್ಟು ನಿರುದ್ಯೋಗ ನಿರ್ವಹಣೆಯತ್ತ ಹೆಜ್ಜೆ ಇರಿಸಿವೆ. 'ಅರಮನೆಗಳ ನಗರ' ಎನಿಸಿದ್ದ ಇದು ಇತ್ತೀಚೆಗೆ **'ಐವರಿಸಿಟಿ'** ಎಂಬ ಹೆಸರಿನತ್ತ ದಾಪುಗಾಲಿರಿಸುತ್ತಿದೆ. ಗುಡಿಕೈಗಾರಿಕೆಗಳು, ಸುತ್ತಲಿನ ಭತ್ತದ ಗಿರಣಿಗಳು, ನೇಯ್ಗೆ ಉದ್ಯಮ, ರೇಷ್ಮೆ ಮುಂತಾದವುಗಳಿಂದ ಮೈಸೂರು ಜಿಲ್ಲೆ ಆರ್ಥಿಕವಾಗಿ ಸದೃಢವಾಗಿ ಬೆಳೆಯುತ್ತಿರುವುದನ್ನು ಗಮನಿಸಬಹುದು. ಪಶುಪಾಲನೆ, ಮೀನುಗಾರಿಕೆ ಕರಕುಶಲ ಉದ್ಯಮ, ಬ್ಯಾಂಕಿಂಗ್ ಹೋಟೆಲ್ ಉದ್ಯಮ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ.

**ಶೈಕ್ಷಣಿಕ ಪರಿಸರ :**

ವೈದ್ಯಕೀಯ ಹಾಗೂ ತಾಂತ್ರಿಕ ಶಿಕ್ಷಣಗಳು ಕ್ರಮವಾಗಿ ಈ ಜಿಲ್ಲೆಯಲ್ಲಿ ೧೯೨೪ ಮತ್ತು ೧೯೪೬ರಿಂದಲೂ ಕಾರ್ಯನಿರ್ವಹಿಸುತ್ತಿರುವುದನ್ನು ಇತಿಹಾಸದ ಪುಟಗಳಿಂದ ತಿಳಿಯಬಹುದು. ಜಿಲ್ಲೆಯಲ್ಲಿರುವ ಪ್ರಮುಖ ಕಾದಂಬರಿಕಾರ್ತಿಯರನ್ನು ಗುರುತಿಸಬಹುದು. ಶ್ರೀಮತಿ ಎಸ್. ಮಂಗಳಾ ಸತ್ಯನ್. ಮತ್ತೋರ್ವರು ಶ್ರೀಮತಿ ಆರ್ಯಾಂಬಪಟ್ಟಾಬಿ. ನಂಜನಗೂಡಿನ ತಿರುಮಲಾಂಬ ಜಿಲ್ಲೆಯಲ್ಲಿ ವ್ಯಾಸಂಗಮಾಡಿದ ಸಾಹಿತ್ಯ ಕಲಾ ದಿಗ್ಗಜರ ಒಂದು ದಂಡೆ ನಮಗೆ ಲಭ್ಯವಿದೆ.

ಮೈಸೂರು ಪರಿಸರದಲ್ಲಿ ಶೈಕ್ಷಣಿಕವಾಗಿ ನಾವು ತಿಳೀಯುವುದಾದರೆ ಪೂರ್ವದಲ್ಲಿ ಗುರುಕುಲ ಪದ್ಧತಿ ರೂಢಿಯಲ್ಲಿ ಇದ್ದು ಅದೇ ಶಿಕ್ಷಣಕ್ಕೆ ಮೂಲವಾಗಿದ್ದಿತ್ತು. ಪವಿತ್ರ ಧಾರ್ಮಿಕ ಗ್ರಂಥಗಳ

ಕಂಠಪಾಠ ಮಾಡಿ ಅದನ್ನು ಶುದ್ಧ ಸ್ವರೂಪದಲ್ಲಿ ಮುಂದಿನ ಪೀಳಿಗೆಗೆ ಭೋದಿಸುವುದು ಶಿಕ್ಷಣದ ಗುರಿಯಾಗಿತ್ತು. ಬರವಣಿಗೆ ಇನ್ನೂ ಅಸ್ತಿತ್ವದಲ್ಲಿಲ್ಲದಿದ್ದಾಗ ಈ ಬಗೆಯ ಬೋಧನೆ ನಡೆಯುತ್ತಿತ್ತು. ನಂತರದಲ್ಲಿ ಧರ್ಮಗ್ರಂಥಗಳ ಪಾಠದ ಜೊತೆಗೆ ಪುರಾಣಗಳು, ಗೀತೆ ಪಠ್ಯಕ್ರಮದಲ್ಲಿ ಸೇರಿದವು. ಶಿಕ್ಷಣದ ಉದ್ದೇಶ, ಪಠ್ಯಕ್ರಮ ಪರೀಕ್ಷೆ ಮುಂತಾದ ಅಂಶಗಳನ್ನು ನಿರ್ಧರಿಸುವಂತಹ ಯಾವ ಸರ್ಕಾರಿ ಸಂಸ್ಥೆಯೂ ಹಿಂದೆ ಅಸ್ತಿತ್ವದಲ್ಲಿರಲಿಲ್ಲ. ಎಲ್ಲವೂ ಗುರುಗಳ ವೈಯಕ್ತಿಕ ಮೇಲ್ವಿಚಾರಣೆಯಲ್ಲಿ ನಡೆಯುತ್ತಿತ್ತು. ಗುರುಕುಲ 'ಕೂಲಿಮಠ'ಗಳ ಮೂಲಕ ಶಿಕ್ಷಣ ನಡೆಯುತ್ತಿತ್ತು. ೧೯ನೇ ಶತಮಾನದ ನಂತರ ಈ ಪ್ರಾಂತ್ಯದಲ್ಲಿ ವಿಶೇಷವಾಗಿ ಬ್ರಿಟಿಷರ ಆಳ್ವಿಕೆ ಕಾಲದಲ್ಲಿ ಆಧುನಿಕ ಶಿಕ್ಷಣ ಪದ್ಧತಿ ಜಾರಿಗೆ ಬಂದಿರುವುದನ್ನು ನಾವು ಅಧ್ಯಯನದಿಂದ ತಿಳಿಯಬಹುದು.

ಮೈಸೂರುಜಿಲ್ಲೆ ಪೂರ್ವ ಕಾಲದಿಂದಲ್ಲೂ ಶೈಕ್ಷಣಿಕವಲಯದಲ್ಲಿ ಮುಂಚೂಣಿಯಲ್ಲಿದೆ. ಜಿಲ್ಲೆಯಲ್ಲಿನ ಸಾಕ್ಷರತೆಯ ಮಟ್ಟ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವುದನ್ನು ಕಾಣಬಹುದು. ಜಿಲ್ಲೆಯಲ್ಲಿ ಇಂದು ಸರಿಸುಮಾರು ಅಂದಾಜಿನ ಪ್ರಕಾರ ಅಂಗನವಾಡಿಗಳ ಸಂಖ್ಯೆ ೩೦೦೦ವನ್ನು ಮೀರಿದೆ. ಸುಮಾರು ೩೧೦೦ಕ್ಕೂ ಹೆಚ್ಚು ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿವೆ. ಅಲ್ಲಿ ೧೩೦೦ಕ್ಕಿಂತ ಹೆಚ್ಚು ಪ್ರೌಢಶಾಲೆಗಳಿವೆ. ಜಿಲ್ಲೆ ೨೦೦ಕ್ಕಿಂತಲೂ ಹೆಚ್ಚು ಪದವಿಪೂರ್ವ ಕಾಲೇಜುಗಳು ಹಾಗೂ ೬೦ಕ್ಕಿಂತ ಹೆಚ್ಚು ಪದವಿ ಕಾಲೇಜುಗಳು, ವೃತ್ತಿಶಿಕ್ಷಣ ಸಂಸ್ಥೆಗಳು ಉರ್ದು ಶಿಕ್ಷಣ ಸಂಸ್ಥೆಗಳು ಹಿಂದಿ ಪ್ರಚಾರ ಸಭಾ ಶಾಲೆಗಳು ಇನ್ನೂ ಇತರೆ ವರ್ಗದ ಶಾಲೆಗಳು ವಸತಿ ನಿಲಯಗಳು ಗ್ರಾಮ ಪಂಚಾಯ್ತಿಗೆ ಒಂದರಂತೆ ಗ್ರಂಥಾಲಯಗಳು ಹೀಗೆ ಶೈಕ್ಷಣಿಕ ವಲಯಕ್ಕೆ ಉತ್ತೇಜನ ನೀಡುವ ಪರಿಸರವಿದೆ. ನಗರ ಕೇಂದ್ರದಲ್ಲಿರುವ ವಿಶ್ವವಿದ್ಯಾನಿಲಯವು ಈ ವರ್ಷ ಶತಮಾನೋತ್ಸವ ಆಚರಣೆಯಲ್ಲಿದ್ದು ಇಲ್ಲಿ ವಿದೇಶಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವುದನ್ನು ನಾವು ಗಮನಿಸಬಹುದು.

**ರಾಜಕೀಯ ಪರಿಸರ :**

ಮೈಸೂರು ಜಿಲ್ಲೆಯು ರಾಜಕೀಯವಾಗಿ ಅನೇಕ ಸ್ಥಿತ್ಯಂತರಗಳನ್ನು ಕಂಡಿದೆ. ಅನೇಕ ಪ್ರತಿಭಾನ್ವಿತ ರಾಜಕೀಯ ನಿಪುಣರನ್ನು ಈ ಜಿಲ್ಲೆಯು ನೀಡಿದೆ. ಅಲ್ಲದೆ ಎಲ್ಲ ವರ್ಗದ ಜನರು ಒಂದೆಂಬಂತೆ ಜೀವನ ನಡೆಸುತ್ತಿದ್ದಾರೆ. ಈ ಸುಂದರ ನಗರ ಕೆಲವು ಮೊದಲುಗಳನ್ನೊಳಗೊಂಡ ನಗರ ಎಂಬ ಖ್ಯಾತಿಗೆ ಒಳಗಾಗಿದೆ. ಮಾಧ್ಯಮ ರಂಗದಲ್ಲಿ ಕ್ರಾಂತಿಯಾಗಲು ಮೂಲ ಪ್ರೇರಣೆ ಎಂದರೆ ಮೈಸೂರು ನಗರ ೧೦೫೯ರಲ್ಲಿ ಮೈಸೂರಿನಿಂದ ಭಾಷ್ಯಮ್ ಭಾಷ್ಯಚಾರ್ಯರಿಂದ ವಾರಪತ್ರಿಕೆ ಮೈಸೂರು ವೃತ್ತಾಂತ ಬೋಧಿನಿ (mysooru vrittanta Bodhini) ಈ ಪತ್ರಿಕೆ ಬರಲು

ಕಾರಣರಾದ ಒಡೆಯರ ಆಳ್ವಿಕೆಯ ಮೊದಲ ಪತ್ರಕರ್ತ (Father of the Kannada Journalism) ಕನ್ನಡ ಪತ್ರಿಕೋದ್ಯಮದ ಪಿತಾಮಹ ಶ್ರೀ ಎಂ.ವೆಂಕಟಕೃಷ್ಣಯ್ಯ ಇವರು ಮೊದಲ ಬಾರಿಗೆ ಪ್ರಾದೇಶಿಕ ಭಾಷೆಗಳಾದ ಕನ್ನಡ ಮತ್ತು ಇಂಗ್ಲಿಷ್ ಇನ್ನು ಇತರೆ ಮಾಹಿತಿಗಳಿರುವ 'ಸುಧರ್ಮ' ಎಂಬ ಪತ್ರಿಕೆಯನ್ನು ಆರಂಭಿಸಿದರು.ಇದು ಭಾರತದ ದೈನಂದಿನ ಪತ್ರಿಕೆಯಾಗಿ ಸಂಸ್ಕೃತದಲ್ಲಿ ಮೈಸೂರಿನಿಂದಲೇ ಪ್ರಸಾರಕಾರ್ಯ ಆರಂಭಿಸಿದ್ದು ಹೆಮ್ಮೆಯ ಸಂಗತಿ. ಇಡೀ ಭಾರತದಲ್ಲೆ ಮೊಟ್ಟ ಮೊದಲ ಬಾರಿಗೆ ಮನಶಾಸ್ತ್ರದ ಪ್ರಾಧ್ಯಾಪಕರಾದ ಶ್ರೀ ಎಂ.ವಿ. ಗೋಪಾಲಸ್ವಾಮಿಯವರಿಂದ ೧೯೩೫ರಲ್ಲಿ ಆಕಾಶವಾಣಿಯು ಪ್ರಥಮ ಬಾರಿಗೆ ಮೈಸೂರು ಕೇಂದ್ರದಿಂದ ಪ್ರಾರಂಭವಾಯಿತು. ಈಗೆ ಮೈಸೂರು ತನ್ನ ಚರಿತ್ರೆಯಲ್ಲಿ ಹಲವಾರು ರೀತಿಯ ಮೊದಲ, ವಿಸ್ಮಯ ಇತಿಹಾಸದ ನೆನಪುಗಳನ್ನು ತನ್ನೊಡಲಲ್ಲಿ ತುಂಬಿಕೊಂಡಿದೆ. ನನ್ನ ಅಧ್ಯಾಯದಲ್ಲಿ ಈ ಜಿಲ್ಲೆಗೆ ಸಂಬಂಧಿಸಿದ ಸಂಕ್ಷಿಪ್ತ ಮತ್ತು ಕಿರುಪರಿಚಯ ರೂಪದಲ್ಲಿ ಮೈಸೂರು ಜಿಲ್ಲೆಯ ಪೌರಾಣಿಕ, ಭೌಗೋಳಿಕ, ಐತಿಹಾಸಿಕ ಸಾಮಾಜಿಕ ಶೈಕ್ಷಣಿಕ ವಿಚಾರಗಳನ್ನು ಗಮನಿಸಿದ್ದೇನೆ.

ಜಿಲ್ಲೆಯು ಗಂಗರ ಕಾಲದಿಂದಲೂ ರಾಜಕೀಯವಾಗಿ ಬೆಳದುಬಂದಿದೆ. ಅನೇಕ ಶಾಸನಗಳಲ್ಲಿ ಕಂಡುಬರುವ, ಪ್ರಾಂತಾಧಿಕಾರಿ, ನಾಡಪ್ರಭು, ಗೌಡ, ಕರಣಿಕ, ಪಟ್ಟಣ ಶೆಟ್ಟಿಗಳ ಮೂಲಕ ಆಡಳಿತ ಸುಲಲಿತವಾಗಿದೆ ಎಂಬುದು ತಿಳಿದುಬರುತ್ತದೆ. ನಂತರ ಮೈಸೂರು ಒಡೆಯರ ಕಾಲದಲ್ಲಿ ಹೈದರಾಲಿ ಟಿಪ್ಪುವಿನ ನಂತರ ಬ್ರಿಟಿಷರ ಆಳ್ವಿಕೆಗಳ ಸುಧಾರಣೆಗಳನ್ನು ಕಾಣಬಹುದು. ಸ್ವಾತಂತ್ರ್ಯದ ನಂತರದ ದಿನಗಳಲ್ಲಿ ಸಾರ್ವಜನಿಕ ಆಡಳಿತಕ್ಕೆ ಒಳಪಟ್ಟು ರಾಜಸತ್ತೆ ಆಳ್ವಿಕೆ ಕೊನೆಗೊಂಡಿತ್ತು. ೧೯೫೨ರಲ್ಲಿ ಮೈಸೂರು ದಕ್ಷಿಣ, ಮೈಸೂರು ಉತ್ತರ ಮತ್ತು ಮೈಸೂರು ಗ್ರಾಮಾಂತರ ಎಂಬ ಮೂರು ವಿಧಾನ ಸಭಾ ಕ್ಷೇತ್ರಗಳಿದ್ದವು. ದ್ವಿಸದಸ್ಯ ಮೈಸೂರು ಲೋಕಸಭಾ ಕ್ಷೇತ್ರ ಅಸ್ತಿತ್ವಕ್ಕೆ ಬಂತು. ೧೯೬೭ರಲ್ಲಿ ಮೈಸೂರು ಮತ್ತು ಚಾಮರಾಜನಗರ ಲೋಕಸಭಾ ಕ್ಷೇತ್ರಗಳು ರಚಿಸಲ್ಪಟ್ಟವು. ಮೈಸೂರು ಲೋಕಸಭೆಯಿಂದ ಮೈಸೂರು ಪ್ರಾಂತ್ಯದ ಎನ್.ರಾಚಯ್ಯನವರಿಂದ ಆರಂಭವಾಗಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅಂತಹ ಮುಂತಾದ ಘಟಾನುಘಟಿ ನಾಯಕರೇ ಪ್ರತಿನಿಧಿಸಲ್ಪಟ್ಟಿದ್ದ ಜಿಲ್ಲೆ. ಪ್ರಸ್ತುತ ಭಾ.ಜ.ಪ. ಶ್ರೀ ಪ್ರತಾಪ್‌ಸಿಂಹ ಲೋಕ ಸಭಾ ಸದಸ್ಯರಾಗಿದ್ದಾರೆ. ಮೈಸೂರು ಜಿಲ್ಲೆಯ ವ್ಯಾಪ್ತಿಯಲ್ಲಿ ೧೧ ವಿಧಾನ ಸಭಾ ಕ್ಷೇತ್ರಗಳಿದ್ದು ಅವುಗಳನ್ನು ಮೈಸೂರು ನಗರ ಮತ್ತು ಗ್ರಾಮಾಂತರ ಎಂದು ವಿಂಗಡಿಸಲಾಗಿದೆ. ಮೈಸೂರುನಗರದಲ್ಲಿ, ಚಾಮುಂಡೇಶ್ವರಿ, ಕೃಷ್ಣರಾಜ, ನರಸಿಂಹರಾಜ ಮತ್ತು ಚಾಮರಾಜ ಎಂದೂ ಗ್ರಾಮಾಂತರದಲ್ಲಿರುವಂತಹ ವರುಣ, ನರಸೀಪುರ, ನಂಜನಗೂಡು, ಹುಣಸೂರು, ಪಿರಿಯಾಪಟ್ಟಣ, ಹೆಗ್ಗಡದೇವನಕೋಟೆ, ಕೃಷ್ಣರಾಜನಗರ ಎಂದು ವಿಂಗಡಿಸಲಾಗಿದೆ.

ಜಿಲ್ಲೆಯಿಂದ ಇಬ್ಬರು ಮುಖ್ಯಮಂತ್ರಿಗಳಾಗಿರುವುದನ್ನೂ ನಾವು ಕಾಣಬಹುದು. ಮೊದಲನೆಯವರು ದೇವರಾಜಅರಸು ಮತ್ತು ಪ್ರಸ್ತುತ ಸಿದ್ದರಾಮಯ್ಯನ ಹುಂಡಿಯ ಸಿದ್ಧರಾಮಯ್ಯನವರು.

ಜಿಲ್ಲೆಯಲ್ಲಿನ ೩೦,೦೧,೧೨೭ಜನಸಂಖ್ಯೆ ಇದ್ದು, ಜನಸಂಖ್ಯೆಗೆ ತಕ್ಕಂತೆ ಆಡಳಿತ ವಿಕೇಂದ್ರಿಕರಣ ಗೊಂಡಿರುವುದನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು.

ಮಹಾನಗರಪಾಲಿಕೆ (ಮೈಸೂರು) ೦೧

ನಗರ ಸಭೆಗಳು (ನಂಜನಗೂಡು ಹುಣಸೂರು) ೦೨

ಪುರಸಭೆಗಳು (ಬನ್ನೂರು, ನರಸೀಪುರ, ನಂಜನಗೂಡು, ಕೃಷ್ಣರಾಜನಗರ) ೦೪

ಪಟ್ಟಣ ಪಂಚಾಯ್ತಿಗಳು (ಪಿರಿಯಾಪಟ್ಟಣ, ಹೆಗ್ಗಡದೇವನಕೋಟೆ, ಸರಗೂರು) ೦೩

| | |
|---|---|
| ತಾಲ್ಲೂಕುಗಳು | ೦೭ |
| ತಾಲ್ಲೂಕು ಪಂಚಾಯ್ತಿಗಳು | ೦೭ |
| ಜಿಲ್ಲಾ ಪಂಚಾಯ್ತಿ | ೦೧ |
| ಹೋಬಳಿಗಳು | ೩೩ |
| ಗ್ರಾಮಪಂಚಾಯ್ತಿಗಳು | ೨೩೫ |
| ಕಂದಾಯ ಗ್ರಾಮಗಳು | ೧೩೩೭ |
| ಉಪ (ದಾಖಲೆ) ಗ್ರಾಮಗಳು | ೮೬೮ |

ಹೀಗೆ ಮೈಸೂರು ಪ್ರಾಂತ್ಯದಲ್ಲಿ ಗ್ರಾಮಮಟ್ಟದಿಂದ ನಗರ ಜೀವನದವರಿಗೆ ಹಂಚಿಕೆಯಾಗಿರುವುದನ್ನು ಗಮನಿಸಬಹುದು ಸಾರ್ವಜನಿಕ ಆಡಳಿತ ಮತ್ತು ಪೋಲೀಸ್ ವ್ಯವಸ್ಥೆ ತುಂಬ ಅಚ್ಚುಕಟ್ಟತನದಿಂದ ಕೂಡಿದೆ.